**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 46-15**

(ಪ್ರಾ.ಸಾ.17 ಚಾ.ಸಾ.-12 )

ತಾಃ 28-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಮಂಜುನಾಥ

ತಂದೆಯ ಹೆಸರು : ಗಂಗಯ್ಯ
ವಯಸ್ಸು : 26 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ನಿಡುವಂದ ಗ್ರಾಮ , ನೆಲಮಂಗಲ ತಾಃ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸದರಿ ಪ್ರಕರಣದಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ಅಮಾನತ್ತು ಮಹಜರ್ ಮಾಡಿಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ 25 ಮಹಜರ್ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇಲ್ಲ. ಮಂಜು ಅಂತ ಬರೆದು ನಾನು ಸಹಿ ಮಾಡಿಲ್ಲ. ಈಗ ನನಗೆ ತೋರಿಸುತ್ತಿರುವ ಮು ಮಾ 6 ರಿಂದ 8 ಇವುಗಳ ಬಟ್ಟೆ ಚೀಲಗಳಿಗೆ ಅಂಟಿಸಿದ ಚೀಟಿಯಲ್ಲಿ ಕಂಡು ಬರುವ 'ಮಂಜು' ಅಂತ ಬರೆದು ಮಾಡಿರುವ ಸಹಿ ನನ್ನದಲ್ಲ.

ದೊಡ್ಡಬೆಳವಂಗಲ ಪೋಲೀಸರು ನನ್ನನ್ನು ಎಲ್ಲಿಗೂ ಕರೆದು ಯಾವುದೇ ಅಮಾನತ್ತು ಮಹಜರ್ ಮಾಡಿಲ್ಲ. ನನಗೆ ಈ ಪ್ರಕರಣದಲ್ಲಿನ 1 ರಿಂದ 5 ನೇ

ಆರೋಪಿತರು ಅಂದರೆ ನ್ಯಾಯಾಲಯದ ಮುಂದಿರುವ 1, 4, 5 ಹಾಗೂ ವಿಸಿಯಲ್ಲಿ ಕಂಡು ಬರುವ 2ನೇ ಆರೋಪಿಯನ್ನು ಹಾಗೂ ಮೃತ 3ನೇ ಆರೋಪಿ ಇವರು ಯಾರನ್ನೂ ನಾನು ಈ ಮೊದಲು ನೋಡಿಲ್ಲ. ಸದರಿ ಮೇಲ್ಕಂಡ ಆರೋಪಿತರಿಂದ ನನ್ನ ಸಮಕ್ಷಮ ಪೋಲೀಸರು ಏನನ್ನೂ ಅಮಾನತ್ತು ಮಾಡಿಲ್ಲ.

ನನಗೆ ನಿಪಿ-25 ರಲ್ಲಿ ಕಾಣಿಸಿದ ಸಂಗತಿಗಳು ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 02.03.2014 ರಂದು ದೊಡ್ಡಬೆಳವಂಗಲ ಪೋಲೀಸರು ನೆಲಮಂಗಲ ತಾಲ್ಲೂಕು ಸೋಮ್‌ಪುರ ಹೋಬಳಿ ಹಳೆ ನಿಜಗಲ್ ಗೇಟ್ ಬಳಿ ಇರುವ ಮಲ್ಲಿಕಾರ್ಜುನಯ್ಯನವರ ಜಮೀನಿನ ಪಕ್ಕದಲ್ಲಿ ಹಾದು ಹೋಗುವ ತುಮಕೂರು - ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಬಸ್ ಶೆಲ್ಟರ್ ಬಳಿ ಈ ಪ್ರಕರಣದ ಐದೂ ಜನ ಆರೋಪಿತರನ್ನು ಕರೆದುಕೊಂಡು ಬಂದಿದ್ದರು ಅಂತ, ಸದರಿ ಸ್ಥಳಕ್ಕೆ ನನ್ನನ್ನು ಹಾಗೂ ಪ್ರಾಸಾ 16 ಲೋಕೇಶ್ ಮತ್ತು ಚಾಸಾ 10 ಮಂಜುನಾಥ ಇವರುಗಳನ್ನು ಕರೆಯಿಸಿ ಈ ಪ್ರಕರಣದ ವಿಚಾರವನ್ನು ನಮಗೆ ತಿಳಿಸಿದ್ದರು ಅಂತ, ಆಗ 1 ರಿಂದ 5ನೇ ಆರೋಪಿತರು ಪೋಲೀಸರಿಗೆ ಮತ್ತು ನಮಗೆ ತಾವು ಕೃತ್ಯವೆಸಗಿದ ಸ್ಥಳವನ್ನು ತಮ್ಮೊಂದಿಗೆ ಬಂದಲ್ಲಿ ತೋರಿಸುತ್ತೇವೆ ಅಂತ ಹೇಳಿ ನಮ್ಮನ್ನು ಮತ್ತು ಪೋಲೀಸರನ್ನು ಮಲ್ಲಿಕಾರ್ಜುನಯ್ಯನವರ ಜಮೀನಿನ ಬಳಿ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ಲಾರಿ ಚಾಲಕನಿಗೆ ಹೊಡೆದಿದ್ದ ಸ್ಥಳ ಎಂದು ತೋರಿಸಿದನು ಅಂತ, ಸದರಿ ಸ್ಥಳದಲ್ಲಿ ರಕ್ತ ನೆಲದ ಮೇಲೆ ಬಿದ್ದು ರಕ್ತ ಒಣಗಿದ ನಿಶಾನೆ ಕಂಡು ಬಂದಿತ್ತು ಅಂತ ,

ನಂತರ ಸದರಿ ಸ್ಥಳದಿಂದ 25 ಅಡಿ ದೂರದಲ್ಲಿ ಒಂದು ಹುಲ್ಲಿನ ಪೊದೆಯಿಂದ ಚಾಲಕನಿಗೆ ಹೊಡೆದು ಕೊಯ್ದು ಬಿಸಾಕಿದ ರಾಡು ಮತ್ತು ಮೂರು ಬ್ಲೇಡುಗಳನ್ನು ಐದು ಜನರ ಪೈಕಿ 1ನೇ ಆರೋಪಿ ರಾಜೇಶ್ ಮತ್ತು 5ನೇ ಆರೋಪಿ ಚಂದು ರಾಥೋಡ್ ಪೊದೆಯಿಂದ ಎತ್ತಿ ಹಾಜರುಪಡಿಸಿದರು ಅಂತ , ಆಗ 1 ರಿಂದ 5 ನೇ ಆರೋಪಿತರು ಎಲ್ಲರೂ ಸೇರಿ ಇವುಗಳನ್ನೇ ನಾವು ಕೃತ್ಯವೆಸಗಲು ಉಪಯೋಗಿಸಿದ್ದೆವು ಅಂತ ಹೇಳಿದರು ಅಂತ , ಆಗ ಪೋಲೀಸರು ಈ ಕುರಿತು ನಿಪಿ 25-ಅಮಾನತ್ತು ಮಹಜರ್ ನಡೆಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

ನಾನು ನಿಪಿ -25ರಲ್ಲಿ ಕಾಣಿಸಿದ ಸಂಗತಿಗಳನ್ನು ತಿಳಿದುಕೊಂಡು ಅದಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿದ್ದರೂ ಸಹ ಸದರಿ ಸಹಿ ನನ್ನದಲ್ಲ ಎಂದು ಹಾಗೂ ಮು ಮಾ 6 ರಿಂದ 8 ಬಿಳಿ ಚೀಲಗಳಿಗೆ ಅಂಟಿಸಿದ ಚೀಟಿಗಳಿಗೆ ಸಹ ನಾನೇ ಸಹಿ ಮಾಡಿದ್ದರೂ ಸಹ ಅದರಲ್ಲಿನ ಸಹಿಗಳು ಸಹ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪೋಲೀಸರ ಮುಂದೆ ಈ ವಿಚಾರವಾಗಿ ಈಗ ನನಗೆ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ..... ಮತ್ತೊಮ್ಮೆ ನೋಡಿದರೆ ಗುರುತಿಸುತ್ತೇನೆ" ಅಂತ ನಿಪಿ 27 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಈಗ ನನಗೆ ತೋರಿಸುತ್ತಿರುವ ಮು ಮಾ 6 ರಿಂದ 9 ಇವುಗಳನ್ನೇ ಪೋಲೀಸರು ನಿಪಿ 25 ರಡಿ ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

1 ರಿಂದ 5ನೇ ಆರೋಪಿತರನ್ನು ನಾನು ನೋಡಿದ್ದರೂ ಸಹ ಹಾಗೂ ಪೋಲೀಸರ ಮುಂದೆ ನಿಪಿ 27 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.